ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ೧೨೯ ಅಂಗನವಾಡಿ ಕೇಂದ್ರಗಳನ್ನು ೧೯೮೫-೮೬ನೇ ಸಾಲಿನಲ್ಲಿ ತೆರದಿದ್ದೇವೆ. ಅವುಗಳಿಗೆ ೧೧೮ ಹುದ್ದೆಗಳಿಗೆ ಕೆಲಸಗಾರರನ್ನು ನೇಮಕಾತಿ ಮಾಡಿದ್ದಾರೆ. ಅವರಲ್ಲಿ ಕೆಲವರು ತರಬೇತಿಗೂ ಕೂಡ ಹೋಗಿದ್ದಾರೆ. ಮತ್ತು ಆ ರೀತಿಯ ನೇಮಕಾತಿಯನ್ನು ಮಾಡಿಕೊಳ್ಳುವುದಕ್ಕಾಗಿ ಬೋರ್ಡ್‌ಂದು ಇದೆ. ಇಂಟರ್‌ವ್ಯೂ ಕಮಿಟಿ ಎಂದು ಇದೆ. ಅದರೆ ಅಸಿಸ್ಟೆಂಟ್ ಕಮೀಷನರ್-ಛೇರ್ಮನ್ನರು ಇರಾಪಿಯು, ಸಹಾಯಕ ನಿರ್ದೇಶಕರು ಒಬ್ಬರು ಸದಸ್ಯರು ಚೈಲ್ಡ್ ಡೆವಲಪ್‌ಮೆಂಟ್ ಪ್ರಾಜೆಕ್ಟ್ ಆಫೀಸರ್ ಕೂಡ ಒಬ್ಬರು ಸದಸ್ಯರು, ನಂತರ ಬಿ.ಡಿ.ಓ. ಕೂಡ ಒಬ್ಬ ಸದಸ್ಯರಾಗಿರುತ್ತಾರೆ ಇವರು ಕೂಡಿ ಮಾಡಿರತಕ್ಕಂತಹ ನೇಮಕಾತಿ ಆದು. ಈ ತರಹ ನೇಮಕಾತಿಯನ್ನು ಮಾಡಲಿಕ್ಕೆ ಅವರಿಗೆ ಅಧಿಕಾರ ಇದೆ. ಒಂದು ವೇಳೆ ಆ ರೀತಿಯ ಅಧಿಕಾರ ಇಲ್ಲದೆ ನೇಮಕಾತಿಯನ್ನು ಮಾಡಿದ್ದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

IX. ದಾವಣಗೆರೆ ಶಂಕರ್ ಟೆಕ್ಸ್‌ಟೈಲ್ ಮಿಲ್ ಹಾಗೂ ಕೆ. ಆರ್. ಮಿಲ್‌ಗಳು ಕಳೆದ ಆರು ತಿಂಗಳಗಳಿಂದ ಮುಚ್ಚಿರುವುದು

ಶ್ರೀ ಪಂಪಾಪತಿ.—ದಾವಣಗೆರೆ ಶ್ರೀ ಶಂಕರ ಟೆಕ್ಸ್‌ಟೈಲ್ ಮಿಲ್ಸ್ ಮತ್ತು ಮೈಸೂರಿನ ಕೆ. ಆರ್. ಮಿಲ್ಲು ಸುಮಾರು ಒಂದು ವರ್ಷ ಆರು ತಿಂಗಳುಗಳಿಂದ ಮಾಲೀಕರುಗಳು ಮಿಲ್ಲುಗಳನ್ನು ಮುಚ್ಚಿದ್ದು ಈಗಾಗಲೇ ಈ ಸದನಲ್ಲಿ ನಾವು ಕಳೆದ ಎರಡು ಅಧಿವೇಶನದಲ್ಲಿ ಇದೇ ವಿಚಾರವನ್ನು ತಿಳಿಸಿದ್ದೇವೆ. ಸರ್ಕಾರ ಈ ಬಗ್ಗೆ ಮಿಲ್ ಮಾಲೀಕರನ್ನು ಕರೆಯಿಸಿ ಮಾತನಾಡುವುದಕ್ಕೆ ಮಾಡಿದ ಪ್ರಯತ್ನಗಳು ಸಫಲವಾಗಿಲ್ಲ. ಶ್ರೀ ಶಂಕರ್ ಮಿಲ್ಲಿನ ೯೦೦ ಜನ ಕೆ. ಆರ್. ಮಿಲ್ಲಿನ ೩೦೦ ಜನ ಕಾರ್ಮಿಕರು ಒಂದೂವರೆ ವರ್ಷದಿಂದ ಕೆಲಸ ಇಲ್ಲದೆ ಅಲೆದಾಡುತ್ತಾ ಜೀವನ ಸಾಗಿಸಲು ಕಷ್ಟ ಪಡುತ್ತಿದ್ದಾರೆ. ಕೆಲವರು ಜೀವನ ಸಾಗಿಸುವುದಕ್ಕೆ ಕಷ್ಟವಾಗಿ ವಿಷ ತೆಗೆದುಕೊಂಡು ಸತ್ತಿದ್ದಾರೆ. ಆದ್ದರಿಂದ ಸರ್ಕಾರ ತೀವ್ರ ಕ್ರಮ ತೆಗೆದುಕೊಳ್ಳುವಂತೆ ಸದನದ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಡಿ. ಮಂಜುನಾಥ್.—ಕಾರ್ಮಿಕರು ವಿಷ ತೆಗೆದುಕೊಂಡು ಸತ್ತು ಹೋಗಿರುವಂತಹ ನಿದರ್ಶನ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಪಂಪಾಪತಿ.—ಸರ್ಟಿಫಿಕೇಟ್‌ನ್ನು ತಂದು ಕೊಡುತ್ತೇನೆ.

ಶ್ರೀ ಡಿ. ಮಂಜುನಾಥ್.—ಶ್ರೀಮಾನ್ ಪಂಪಾಪತಿಯವರಿಗೆ ಚೆನ್ನಾಗಿ ಗೊತ್ತಿದೆ. ನಾನೂ ಕೂಡ ಈ ಬಗ್ಗೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇನೆ. ದಾವಣಗೆರೆ ಶಂಕರ್ ಟೆಕ್ಸ್‌ಟೈಲ್ ಮಿಲ್‌ನ ಬಗ್ಗೆ ನನಗಿಂತ ಅವರಿಗೆ ಚೆನ್ನಾಗಿ ಗೊತ್ತಿದೆ. ಅವರಿಗೆ ದೊಡ್ಡ ರಿಯಾಯಿತಿಯನ್ನೇ ಕೊಟ್ಟಿದ್ದೇವೆ. ಅವರು ಜಮೀನನ್ನು ಮಾರಿ ಮಿಲ್ಲನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದರು. ಈಗ ಆ ಜಮೀನನ್ನು ಮಾರಾಟ ಮಾಡಿದ್ದಾರೆ. ಮಿಲ್ಲನ್ನು ಪ್ರಾರಂಭ ಮಾಡುತ್ತೇವೆಂದೂ ಹೇಳಿದ್ದಾರೆ ಕೆ. ಆರ್. ಮಿಲ್‌ನ ಬಗ್ಗೆ ಹೇಳುವುದಾದರೆ, ಅವರು ಇಂಡಸ್ಟ್ರಿಯಲ್ ಬ್ಯಾಂಕ್‌ಗೆ ಹೋಲಕ್ಕಾಗಿ ಅರ್ಜಿಯನ್ನು ಹಾಕಿ ಕೊಂಡಿದ್ದಾರೆ. ಸರ್ಕಾರದಿಂದ ಅವರಿಗೆ ಏನೇನು ರಿಯಾಯಿತಿಯನ್ನು ಕೊಡಬೇಕೋ. ಅದನ್ನೂ ಕೂಡ ಕೊಡುವುದಕ್ಕೆ ಶಿಫಾರಸ್ಸು ಮಾಡಿದ್ದೇವೆ. ಅವರಿಗೆ ಒಂದೂವರೆ ಕೋಟಿ ರೂಪಾಯಿಗಳ ಸಾಲ ಮಂಜೂರಾಗಬೇಕು ಆ ಮಿಲ್ಲನ್ನೂ ಪ್ರಾರಂಭಿಸುವುದಕ್ಕೆ ಸರ್ಕಾರ ತನ್ನ ಕೈಲಾದ ಮಟ್ಟಿಗೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದೆ. ಇದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಇದರಲ್ಲಿ ನಮ್ಮ ಅವರ ಮಧ್ಯ ವಿವಾದ ಏನೂ ಇಲ್ಲ.

ವಿವಾದಗಳೆಲ್ಲಾ ಬಗೆಹರಿದಿವೆ, ಆ ಪಂಚಾಯಿತಿಯಲ್ಲಿ ಮಾನ್ಯ ಕೃಷ್ಣನ್ ಅವರೂ ಇದ್ದರು. ಆದರೂ ಸರ್ಕಾರದಿಂದ ನಾವು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಪಂಪಾಪತಿ.—ಎರಡು ಸಲ ಪ್ರಯತ್ನ ಮಾಡಿದರೂ ಫಲಕಾರಿಯಾಗಿಲ್ಲ. ಸುಮಾರು ೪ ಸಾವಿರ ಜನ ಕಳೆದ ಒಂದೂವರೆ ವರ್ಷಗಳಿಂದ ನಿರುದ್ಯೋಗಿಗಳಾಗಿದ್ದಾರೆ.

ಅಧ್ಯಕ್ಷರು.—ನಿಯಮದ ಪ್ರಕಾರ ಉಪಪ್ರಶ್ನೆ ಕೇಳಲು ಅವಕಾಶವಿಲ್ಲ.

ಶ್ರೀ ಪಂಪಾಪತಿ.—ಸುಮಾರು ನಾಲ್ಕು ಸಾವಿರ ಜನ ಕಾರ್ಮಿಕರ ಹೆಂಡತಿ ಮಕ್ಕಳು ಜೀವನ ಮಾಡಂವುದಕ್ಕೆ ಕಷ್ಟವಾಗಿದೆ. ಪ್ರಯತ್ನ ಮಾಡೀ ಮಾಡೀ ಮಾಡೀ ಏನೂ ಆಗಿಲ್ಲ ಎಂದರೆ ಮುಂದೆ ಏನು ಮಾಡಬೇಕು.

ಅಧ್ಯಕ್ಷರು.—ಮಾನ್ಯ ಪಂಪಾಪತಿಯವರೇ, ನಿಮಗೆ ನಿಯಮ ಗೊತ್ತಿದೆಯೇ ?

ಶ್ರೀ ಪಂಪಾಪತಿ.—ನನಗೆ ಗೊತ್ತಿದೆ.

ಅಧ್ಯಕ್ಷರು.—ತಾವು ಯಜಮಾನರಿದ್ದೀರಿ. ತಾವೇ ಹೀಗೆ ವರ್ತಿಸಿದರೆ ಹೇಗೆ ? ತಾವು ಹೋಗಿ ಮಂತ್ರಿಗಳ ಜೊತೆ ಮಾತನಾಡಿ.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ, ತಾವು ಬರೀ ಇವರಿಗೆ ಅಷ್ಟೇ ಅಲ್ಲ ಮಾನ್ಯ ಮಂತ್ರಿಗಳಿಗೂ ಈ ಬಗ್ಗೆ ಬೇಗ ತಿಳಿಸಿ ಎಂದು ಹೇಳಬೇಕಾಗುತ್ತದೆ. ತಾವು ಅವರಿಗೂ ಹೇಳಿ.

ಅಧ್ಯಕ್ಷರು.—ಈ ಬಗ್ಗೆ ನಾಳೆ ಕುಳಿತುಕೊಂಡು ಮಾತನಾಡಿ. ಈಗ ಮಾನ್ಯ ಕಂದಾಯ ಸಚಿವರಿಂದ ಉತ್ತರ.

ಶ್ರೀ ಪಂಪಾಪತಿ.—ಅಧ್ಯಕ್ಷರೇ, ಈಗ...

ಅಧ್ಯಕ್ಷರು.—ಮಾನ್ಯ ಪಂಪಾಪತಿಯವರೇ ತಾವು ಮಂತ್ರಿಗಳ ಹತ್ತಿರ ಹೋಗಿ ಮಾತನಾಡಿ. ವಿಳಂಬವಾದರೆ ಅವರು ಮತ್ತೆಲ್ಲೋ ಹೊರಟುಹೋಗುತ್ತಾರೆ.

ರಾಜ್ಯದ ಬರಗಾಲ ಪರಿಸ್ಥಿತಿ ಮೇಲಿನ ಚರ್ಚೆಗೆ ಉತ್ತರ :

ಶ್ರೀ ಎಸ್. ಆರ್. ಬೊಮ್ಮಾಯಿ.—(ಮಾನ್ಯ ಕಂದಾಯ ಮಂತ್ರಿಗಳು) ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿರತಕ್ಕ ಭೀಕರ ಬರಗಾಲ ಪರಿಸ್ಥಿತಿ ಬಗ್ಗೆ ಈ ಮನೆಯ ಸದಸ್ಯರು ಅತ್ಯಂತ ಪ್ರಥಮ ಆದ್ಯತೆಯನ್ನು ಕೊಟ್ಟು ಎಲ್ಲಾ ವಿಷಯಗಳನ್ನ ಮುಂದೂಡಿ ಅದರಲ್ಲೂ ರಾಜ್ಯಪಾಲರ ಭಾಷಣದ ಮೇಲೆ ಆಗತಕ್ಕ ಚರ್ಚೆಯನ್ನು ಮುಂದೂಡಿ ಈ ವಿಷಯವನ್ನು ತೆಗೆದುಕೊಂಡಿದ್ದೇವೆ.

ಅಧ್ಯಕ್ಷರು.—ಈಗ ೫ ಅಥವಾ ೧೦ ನಿಮಿಷಗಳಲ್ಲಿ ಸಭೆಯನ್ನು ವೀಕ್ಷಿಸಲು ರಷ್ಯನ್ ಡೆಲಿಗೇಟ್ಸ್ ಬರುತ್ತಾರೆ. ಆಗ ತಾವು ಸ್ವಲ್ಪ ಇಂಗ್ಲೀಷ್‌ನಲ್ಲಿ ಮಾತನಾಡಿ, ಈ ಮನೆಯ ಸದಸ್ಯರು ಲಾಂಜ್‌ನಲ್ಲಿ ಇರುವವರೆಲ್ಲಾ ಒಳಕ್ಕೆ ಬರಲಿ.

ಶ್ರೀ ಎಸ್. ಬಂಗಾರಪ್ಪ.—ರಷ್ಯನ್ ಡೆಲಿಗೇಟ್ಸ್ ಬರುವುದರಿಂದ ಮಾನ್ಯ ಕೃಷ್ಣನ್ ಅವರು ಬಹಳ ಹುರುಪಿನಿಂದ ಇರುವಂತೆ ಕಾಣುತ್ತಿದೆ.

ಶ್ರೀ ಎಂ.ಎಸ್ ಕೃಷ್ಣನ್.—ನೀವೂ ಕೂಡಾ ಬಹಳ ಹುರುಪಿನಿಂದಲೇ ಇದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ರಷ್ಯನ್ ಡೆಲಿಗೇಟ್ಸ್ ಇಲ್ಲಿಗೆ ಬಂದ ಸಮಯದಲ್ಲಿ ಅವರು ಇಂಗ್ಲೀಷ್‌ನಲ್ಲಿ ಹೇಳುತ್ತಿರುವಾಗ ಕನ್ನಡದಲ್ಲೇ ಉತ್ತರ ಕೊಡಿ ಎಂದು ಒತ್ತಾಯ ಮಾಡುವುದು ಬೇಡ.

ಅಧ್ಯಕ್ಷರು.—ಡೆಲಿಗೇಟ್ಸ್ ಬಂದಾಗ ಇಂಗ್ಲೀಷ್‌ನಲ್ಲೇ ಉತ್ತರ ಕೊಡಲಿ. ಇದಕ್ಕೆ ಯಾರೂ ಆಬ್ಜೆಕ್ಟ್ ಮಾಡುವುದು ಬೇಡ,

ಒಬ್ಬ ಮಾನ್ಯ ಸದಸ್ಯರು.—ಆಬ್ಜೆಕ್ಟ್ ಮಾಡುವ ನಾರಾಯಣ ಕಂಪೌಂಡರ್ ಅವರು ಈಗ ಸಭೆಯಲ್ಲಿ ಇಲ್ಲ.

ಶ್ರೀ ಮಲ್ಲಿಕಾರ್ಜುನಗೌಡ ಎಸ್. ಪಾಟೀಲ್.—ಅಧ್ಯಕ್ಷರೇ, ಇದೇನು? ಅಸೆಂಬ್ಲಿಯಲ್ಲೂ ಕೂಡಾ ಬರಗಾಲ ಬಂದಿದೆ. ಅನೇಕ ಜನ ಮೆಂಬರ್ಸ್ ಸಭೆಯಲ್ಲಿ ಇಲ್ಲ. ಬರಗಾಲ ಎಂಬುದು ಇಡೀ ರಾಜ್ಯದ ಸಮಸ್ಯೆ. ಆದ್ದರಿಂದ ಸಭೆಯನ್ನು ಅರ್ಧ ಗಂಟೆ ಮುಂದಕ್ಕೆ ಹಾಕಿ. ಎಲ್ಲಾ ಜನರನ್ನು ಕರೆಯಿಸಿ ಆಮೇಲೆ ಸಭೆಯನ್ನು ಪ್ರಾರಂಭ ಮಾಡಿ.

ಅಧ್ಯಕ್ಷರು.—ಇಪ್ಪತ್ತು ಇನ್ನೇನು ವಿಷಯ ಇಲ್ಲ. ಉತ್ತರ ಆದಮೇಲೆ ೫ ಗಂಟೆಗೆ ಸಭೆಯನ್ನು ಮುಗಿಸೋಣ. ಈಗ ತಾವು ಕುಳಿತುಕೊಳ್ಳಿ,